ಅತಿವೃಷ್ಟಿಯಾಗಿರುವಂತಹ ಸಂದರ್ಭದಲ್ಲಿ ಸಮರೋಪಾದಿ ರೀತಿಯಲ್ಲಿ ಏನು ಕೆಲಸವಾಗಬೇಕಾಗಿತ್ತೋ ಅದನ್ನು ತಾವು ಮಾಡಿಲ್ಲ.

12.40 ಪಿ.ಎಂ

ಹೀಗೆ ಇಂತಹ ಅತಿವೃಷ್ಟಿಯ ಸಂದರ್ಭದಲ್ಲಿ ಜನರಿಗೆ ಕಣ್ಣಿಗೆ ಮಣ್ಣೆರಚುವಂತಹ ಕೆಲಸವನ್ನು ಸರ್ಕಾರ ಇವತ್ತು ಮಾಡುತ್ತಿದೆ, ಕೇವಲ ಸಿದ್ಧಪಡಿಸಿದ ವರದಿಯನ್ನು ಮಾನ್ಯ ಕಂದಾಯ ಸಚಿವರು ಇವತ್ತು ಈ ಸದನಕ್ಕೆ ಕೊಡುತ್ತಿದ್ದಾರೆ. ಅವರು ರಾಜ್ಯದ ಕೇವಲ ನಾಲ್ಕೈದು ಜಿಲ್ಲೆಗಳಲ್ಲಿ ಮಾತ್ರ ಪ್ರವಾಸ ಮಾಡಿ ಇಡೀ ರಾಜ್ಯಾದ್ಯಂತ ಹೋಗಿ ಬಂದಿದ್ದೇನೆಂದು ಹೇಳುತ್ತಿದ್ದಾರೆ. ಹೀಗಾಗಿ ಅತಿವೃಷ್ಟಿಯಲ್ಲಿ ತೊಂದರೆಗೀಡಾದ ಜನರಿಗೆ ಪರಿಹಾರ ಕೊಡುವುದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ, ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ವಿರೋಧಪಕ್ಷದ ನಾಯಕರು ನೇತೃತ್ವದಲ್ಲಿ ಬಿಜೆಪಿಯ ಎಲ್ಲಾ ಸದಸ್ಯರು
ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರ ಉತ್ತರವನ್ನು ನಾನು ಕೇಳಿದೆ. ಅವರ ಉತ್ತರದ ಧಾಟಿಯಲ್ಲಿ ಸರ್ಕಾರ ಸಮಸ್ಯೆಯ ತೀಕ್ಷ್ಣತೆಯನ್ನು ಎಷ್ಟರಮಟ್ಟಿಗೆ ನೋಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಬಹಳ ಕ್ಯಾಷುಯಲ್ ಆಗಿ ತೆಗೆದುಕೊಂಡಿದ್ದಾರೆಂದು ನನಗನ್ನಿಸುತ್ತದೆ. ಅದಕ್ಕೆ ನನ್ನದು ಒಂದು ನಿದರ್ಶನ ನಾನು ಹೇಳಿದೆ, ಅದನ್ನು ಇವತ್ತು ಸ್ಪಷ್ಟೀಕರಿಸುತ್ತೇನೆ. ತಾವು ಮೂನ್ನೂರು ಕೋಟಿ ರೂಪಾಯಿಗಳ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆಂದು ಹೇಳಿದ್ದಿರಿ, ಅದನ್ನು ನಾನು ನೋಡಿದೆ. ಆದರೆ ನನ್ನ ಭಾಷಣದಲ್ಲಿ ಏನು ಆರೋಪ ಮಾಡಿದ್ದೆ ಎಂದರೆ, ಈ ವರದಿ ಬಹಳ ಹಿಂದೆ ತಯಾರಿಸಿದ್ದು, ಮುಖಪುಟವನ್ನು ಮಾತ್ರ ಪ್ರತ್ಯೇಕವಾಗಿ ಬರೆದಿದ್ದಾರೆಂದು ಹೇಳಿದ್ದೆ. ಅದು ಸತ್ಯವಾಯಿತು ಎಂದು ನಾನು ಹೇಗೆ ಹೇಳುತ್ತೇನೆಂದರೆ, ವರದಿಯಲ್ಲಿ 56 ಜನ ಸತ್ತಿದ್ದಾರೆಂದು ಕಳುಹಿಸಿದ್ದಿರಿ, ಈಗ ಉತ್ತರ ಕೊಡುವಾಗ 156 ಜನ ಸತ್ತಿದ್ದಾರೆಂದು ಹೇಳಿದ್ದೀರಿ, ಬಹುಶಃ ತಾವು ಹೇಳಿದ್ದಕ್ಕಿಂತ ಇನ್ನೂ ಜಾಸ್ತಿ ಇದ್ದಾರೇನೋ ಗೊತ್ತಿಲ್ಲ. ಇವತ್ತು 48,000 ಮನೆಗಳು ಕುಸಿದು ಬಿದ್ದಿವೆಯೆಂದು ಹೇಳಿದ್ದೀರಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ 300 ಕೋಟಿ ರೂಪಾಯಿಗಳ ಆ ವರದಿಯಲ್ಲಿ 5000 ಮನೆಗಳು ಕುಸಿದಿವೆಯೆಂದು ಇಲ್ಲ. ಎಲ್ಲಾ ದೋಚಿಕೊಂಡು ಹೋದಮೇಲೆ ಕೋಟಿ ಬಾಗಿಲು ಹಾಕಿಕೊಂಡಂತಾಗಿದೆ, ರಾಜ್ಯದಲ್ಲಿ ಎಷ್ಟು ನಷ್ಟವಾಗಿದೆ ಎಂದರೆ, ರಾಜ್ಯದಲ್ಲಿ ಸೇತುವೆಗಳು ಹಾಳಾಗಿರುವುದು, ರಸ್ತೆಗಳು ಹಾಳಾಗಿರುವುದು, ಬೆಳೆ ನಾಶವಾಗಿರುವುದೆಲ್ಲಾ ಬಹುಶಃ ಒಂದು ಸಾವಿರ ಕೋಟಿ ರೂಪಾಯಿಗಳಾಗಿರಬಹುದು. ನಿಮ್ಮ ಒಂದು ನಿರ್ಲಿಪ್ತತೆಯಿಂದ ಕೇಂದ್ರ ಸರ್ಕಾರಕ್ಕೆ ಅಷ್ಟೊಂದು ನಷ್ಟವಾಗಿಲ್ಲವೇನೋ ಎನ್ನುವ ಭಾವನೆ ಬರುತ್ತಿದೆ. ನೀವೇನಾದರೂ ಕೇಂದ್ರ ಸರ್ಕಾರದ ಒಂದು ತಂಡವನ್ನು ಕರೆತಂದಿದ್ದೀರಾ? ಆ ಒಂದು ತಂಡ ಇಲ್ಲಿಗೆ ಬರುವಷ್ಟು ನೀವು ಕೇಂದ್ರ ಸರ್ಕಾರಕ್ಕೆ ಸಮಸ್ಯೆಯನ್ನು ಮನವರಿಕೆ ಮಾಡಿಕೊಟ್ಟಿಲ್ಲ, ಅವರಿಗೆ ಅದು ಹೇಗೆ ಗೊತ್ತಾಗುತ್ತದೆ? ಅದಕ್ಕೆ ನಾನು ಅವತ್ತು ಹೇಳಿದ್ದು ಇವತ್ತು ನಿಜವಾಯಿತು ಎಂದು ಹೇಳಿದ್ದು. ಪ್ರಕೃತಿ ವಿಕೋಪ ನಿಧಿಯಲ್ಲಿ